2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 29/2023

| | | |
|---|---|---|
| ಸಾಕ್ಷಿದಾರರ ಹೆಸರು | - ರವಿಕುಮಾರ್ | ಪಿಡಬ್ಲೂ -2 |
| ತಂದೆಯ ಹೆಸರು | - ಪಿಜಿನಾ | ಸಿಡಬ್ಲೂ -2 |
| ವಯಸ್ಸು | - 40 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ನೇರಳಕಟ್ಟೆ | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **jitsi app** ನಲ್ಲಿ ವೀಡಿಯೋ ಕಾನ್ಪರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 04.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು, ಆತ ಹೊನಗುಂಡಿ ಗ್ರಾಮದವನು ಮತ್ತು ನಮ್ಮ ಜನಾಂಗಕ್ಕೆ ಸೇರಿದವನು. ಮೃತ ಯಶೋಧಾ ಗೊತ್ತು ಆಕೆ ಆರೋಪಿಯ 2 ನೇ ಹೆಂಡತಿ. ಫ್ರಾಸಾ.1 ಗೊತ್ತು, ಆತ ಮೃತಳ ಮಗ. ಸಹ ಪಂಚರಾದ ಚಾಸಾ.3 ರಿಂದ ಚಾಸಾ.5 ರವರು ಗೊತ್ತು. ಚಾಸಾ.8 ರಿಂದ ಚಾಸಾ.12 ರವರು ಗೊತ್ತು. ಚಾಸಾ.13 ರವರು ಗೊತ್ತು, ಆತ ಮೃತ ಯಶೋಧಾ ಮತ್ತು ಆರೋಪಿಯ ಮಗ.

2. ಯಶೋಧಾಳ ಮೊದಲನೇ ಗಂಡ ಈಗ್ಗೆ 30 ವರ್ಷಗಳ ಹಿಂದೆ ಮೃತಪಟ್ಟಿದ್ದನು. ನಂತರ ಯಶೋಧಾ ಮತ್ತು ಆಕೆಯ ಮಗನಾದ ಫ್ರಾಸಾ.1 ರವರು ನೀಲಿಖಾನ್ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಒಟ್ಟಿಗೆ ವಾಸವಾಗಿದ್ದರು. ಯಶೋಧಾ ಮೃತಪಡುವ 10 ವರ್ಷಗಳ ಹಿಂದೆ ಆಕೆ ಆರೋಪಿಯನ್ನು ಮದುವೆಯಾಗಿದ್ದಳು. ನಂತರ ಆಕೆ ಹೊನ್ನಗುಂಡಿಯಲ್ಲಿರುವ ಆರೋಪಿಯ ಮನೆಯಲ್ಲಿ ಆತನೊಂದಿಗೆ ವಾಸವಾಗಿದ್ದಳು. ಆ ಸಮಯದಲ್ಲಿ ಫ್ರಾಸಾ.1 ಪ್ರತ್ಯೇಕವಾಗಿ ದುರ್ಗಾಪರಮೇಶ್ವರಿ ಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದನು.

3. ನಮ್ಮ ಜನಾಂಗಕ್ಕೆ ಸೇರಿದ ಸತ್ಯ ಸಾರಾಮಣಿ ದೇವಸ್ಥಾನವಿದೆ ಸದರಿ ದೇವಸ್ಥಾನದ ಸಮಿತಿಯಲ್ಲಿ ಆರೋಪಿ ಮತ್ತು ಮೃತ ಯಶೋಧಾ ಸದಸ್ಯರಾಗಿದ್ದರು. ಯಶೋಧಾ ಆರೋಪಿಯನ್ನು ಮದುವೆಯಾಗುವ ಹಿಂದಿನಿಂದಲೂ ನನಗೆ ಆತನ ಪರಿಚಯವಿದೆ.

4. ದಿನಾಂಕ 16.11.2022 ರಂದು ನಾನು ನೇರಳಕಟ್ಟೆಯಲ್ಲಿರುವ ನಮ್ಮ ಮನೆಯಲ್ಲಿದ್ದೆನು. ಆಗ ಚಾಸಾ.16 ಸಂತೋಷ್ ರವರು ನನಗೆ ಫೋನ್ ಮಾಡಿ ಯಶೋಧಾರವರು ಮೃತಪಟ್ಟಿರುವುದಾಗಿ ತಿಳಿಸಿದರು. ನಂತರ ನಾನು ಕೂಡಲೇ ಯಶೋಧಾ ಆರೋಪಿಯೊಂದಿಗೆ ಹೊನ್ನಗುಂಡಿಯಲ್ಲಿ ವಾಸವಾಗಿದ್ದ ಮನೆಗೆ ಹೋದೆನು. ಅಲ್ಲಿ ಅವರ ಅಕ್ಕಪಕ್ಕದ ಮನೆಯವರಾದ ಚಾಸಾ.4 ಅನ್ನಪೂರ್ಣ ಮತ್ತು ಚಾಸಾ.5 ಬೇಬಿ ಮತ್ತು ಚಾಸಾ.9 ಸತೀಶ, ಫ್ರಾಸಾ.1 ವಿಜಯ್ ಕುಮಾರ್, ಚಾಸಾ.8 ಮೀನಾ, ಉಮೇಶ, ರವಿ ಮತ್ತು ರಮೇಶರವರು

ಇದ್ದರು. ಯಶೋಧಾ ಆರೋಪಿಯೊಂದಿಗೆ ವಾಸವಿದ್ದ ಮನೆಯ ಮೊದಲನೇ ಕೋಣೆಯಲ್ಲಿ ಯಶೋಧಾಳ ಮೃತದೇಹವಿತ್ತು. ಅಲ್ಲಿಗೆ ಕೊಪ್ಪ ವೃತ್ತ ನಿರೀಕ್ಷಕರು ಮತ್ತು ಇತರೆ ಪೊಲೀಸರು ಬಂದಿದ್ದರು. ಅವರು ಅಲ್ಲಿ ಸೇರಿದ್ದವರನ್ನು ಮತ್ತು ನನ್ನನ್ನು ವಿಚಾರಿಸಿದರು ಮತ್ತು ತನಿಖೆ ಮಾಡುತ್ತಿದ್ದರು.

5. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 16.11.2022 ರಂದು ಪೊಲೀಸರು ಮೃತ ಯಶೋಧಾಳ ಶವ ಪರೀಕ್ಷೆಯನ್ನು ನಡೆಸಲು ಸಹಕರಿಸುವಂತೆ ಸಾಕ್ಷಿಗೆ ನೀಡಿದ್ದಾರೆ ಎಂದು ಹೇಳಲಾದ ನೋಟೀಸು ಮತ್ತು ಅದೇ ದಿನ ಸಾಕ್ಷಿಯ ಸಮಕ್ಷಮ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಶವಪಂಚನಾಮೆಯಾಗಿದ್ದು ಅವುಗಳನ್ನು ನಿಪಿ.7 ಮತ್ತು ನಿಪಿ.8 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.7(ಎ) ಮತ್ತು ನಿಪಿ.8(ಎ) ಎಂದು ಗುರುತಿಸಲಾಯಿತು.

6. ಸದರಿ ಸಹಿಗಳನ್ನು ಮೇಲೆ ಹೇಳಿದಂತೆ ಯಶೋಧಾಳ ಶವವನ್ನು ನೋಡಲು ಹೊನ್ನಗುಂಡಿಯಲ್ಲಿರುವ ಅವರ ಮನೆಗೆ ಹೋಗಿದ್ದಾಗ ಮಾಡಿದ್ದೇನೆ. ಯಶೋಧಾ ಮೃತಪಟ್ಟಿದ್ದರಿಂದ ಪೊಲೀಸರು enquiry ಮಾಡಿ ನನ್ನ ಸಹಿಗಳನ್ನು ಪಡೆದುಕೊಂಡಿದ್ದಾರೆ. ಆ ಸಮಯದಲ್ಲಿ ನಾನು ಯಶೋಧಾಳ ಶವವನ್ನು ನೋಡಿದ್ದೇನೆ. ಆಕೆಯ ಎಡಗಣ್ಣು ಕಪ್ಪಗಾಗಿತ್ತು ಮತ್ತು ಊದಿಕೊಂಡಿತ್ತು, ಮೂಗಿನ ಮೇಲೆ ರಕ್ತ ಹೆಪ್ಪು ಗಟ್ಟಿತ್ತು, ಆಕೆಯ ತಲೆಯ ಹಿಂಭಾಗದಲ್ಲಿ ಗಂಟಿನಂತೆ ಊದಿಕೊಂಡಿತ್ತು,

ಆಕೆಯ ಬೆನ್ನಿನ ಮೇಲೆ ಕೋಲಿನಿಂದ ಹೊಡೆದ ಗುರುತು ಇತ್ತು ಮತ್ತು ಆ ಭಾಗದಲ್ಲಿ ಊದಿಕೊಂಡಿತ್ತು, ಕುತ್ತಿಗೆಯ ಬಳಿ ಚರ್ಮ ಕಪ್ಪಗೆ ಆಗಿತ್ತು.

7. ಯಶೋಧಾ ಆರೋಪಿಯ ಮೇಲೆ ಆತನಿಗೆ ಬೇರೆಯವರೊಂದಿಗೆ ಸಂಬಂಧವಿದೆ ಎಂದು ಅನುಮಾನಪಡುತ್ತಿದ್ದರಿಂದ ಆಕೆ ಮೃತಪಡುವ ಹಿಂದಿನ ದಿನ ಆರೋಪಿ ಕುಡಿದು ಬಂದು ಆಕೆಯೊಂದಿಗೆ ಗಲಾಟೆ ಮಾಡುತ್ತಿದ್ದಾಗಿ ಅವರ ಪಕ್ಕದ ಮನೆಯವರಿಂದ ನನಗೆ ತಿಳಿಯಿತು. ಆ ಸಮಯದಲ್ಲಿ ಚಾಸಾ.13 ಸಹ ಇದ್ದನು. ನಾನು ಅವನನ್ನು ವಿಚಾರಿಸಿದೆನು, ಆಗ ಆತ ಹಿಂದಿನ ದಿನ ಆರೋಪಿ ಮತ್ತು ಯಶೋಧಾ ಜಗಳ ಮಾಡಿಕೊಳ್ಳುತ್ತಿದ್ದಾಗಿ ನಂತರ ಆತ ಊಟ ಮಾಡಿ ಮಲಗಿದ್ದಾಗಿ, ಮಾರನೇ ದಿನ ಆತ ಎದ್ದು ನೋಡಿದಾಗ ಆತನ ತಾಯಿ ಮೃತಪಟ್ಟಿದ್ದಾಗಿ ತಿಳಿಸಿದನು. ಆರೋಪಿ ಯಶೋಧಾಳೊಂದಿಗೆ ಗಲಾಟೆ ಮಾಡಿ ಕೋಲಿನಿಂದ ಆಕೆಗೆ ಹೊಡೆದು ಕೊಂದಿರುವುದಾಗಿ ತಿಳಿಯಿತು. ಸದರಿ ವಿಚಾರಗಳನ್ನು ನಾನು ಪೊಲೀಸರಿಗೆ ತಿಳಿಸಿದ್ದೇನೆ. ಅಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸಿ ಅದಕ್ಕೆ ನನ್ನ ಮತ್ತು ಚಾಸಾ.4 ಮತ್ತು ಚಾಸಾ.5 ರವರ ಸಹಿಗಳನ್ನು ಪಡೆದುಕೊಂಡಿದ್ದಾರೆ. ಸದರಿ ಪಂಚನಾಮೆಯನ್ನು ಪೊಲೀಸರು ಮಧ್ಯಾಹ್ನ 2.30 ಗಂಟೆಯಿಂದ 4.00 ಗಂಟೆಯವರೆಗೆ ಜರುಗಿಸಿದ್ದಾರೆ.

8. ಸಾಕ್ಷಿಗೆ ನಿಪಿ.3 ರಿಂದ ನಿಪಿ.6 ಎಂದು ಗುರುತಿಸಲಾಗಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳ ಪೈಕಿ ನಿಪಿ.3, ನಿಪಿ.4

ಮತ್ತು ನಿಪಿ.5 ರಲ್ಲಿ ಯಶೋಧಾಳ ಮೃತ ದೇಹ ಮತ್ತು ಆಕೆಯ ಮೈ ಮೇಲೆ ನಾನು ಹೇಳಿದ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ. ನಿಪಿ.5 ಮತ್ತು ನಿಪಿ.6 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಸದರಿ ಫೋಟೋಗಳಲ್ಲಿ ಮೇಲೆ ಹೇಳಿದಂತೆ ಆರೋಪಿ ಮತ್ತು ಯಶೋಧಾ ವಾಸವಿದ್ದ ಮನೆಯಲ್ಲಿ ಪೊಲೀಸರು ಮಹಜರ್ ಮಾಡುವಾಗ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ನಾನು ಯಶೋಧಾಳ ಮೃತದೇಹವನ್ನು ನೋಡಿದಾಗ ಆಕೆ ನೇರಳೆ ಬಣ್ಣದ ನೈಟಿಯನ್ನು ಧರಿಸಿದ್ದಳು.

9. ದಿನಾಂಕ 17.11.2022 ರಂದು ಜಯಪುರ ಪೊಲೀಸರು ನನ್ನನ್ನು ತಮ್ಮ ಠಾಣೆಗೆ ಕರೆಸಿದ್ದರು. ಆ ದಿನ ನನ್ನೊಂದಿಗೆ ಚಾಸಾ.3 ಗಿರೀಶರವರು ಬಂದಿದ್ದರು. ನಾವು ಅಲ್ಲಿಗೆ ಹೋದಾಗ ಸಮಯ ಬೆಳಿಗ್ಗೆ 8.30 ಗಂಟೆಯಾಗಿತ್ತು. ಆರೋಪಿ ತಾನು ಯಶೋಧಾಳನ್ನು ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿರುವುದಾಗಿ ಹೇಳಿ ಸ್ಥಳ ಪರಿಶೀಲನೆ ಮಾಡಿ ಮಹಜರ್ ಮಾಡಬೇಕಾಗಿದೆ ಅದಕ್ಕೆ ನೀವು ಬರಬೇಕು ಎಂದು ಪೊಲೀಸರು ನಮ್ಮನ್ನು ಕರೆದರು. ಅದಕ್ಕೆ ನಾವು ಒಪ್ಪಿಕೊಂಡೆವು.

10. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 17.11.2022 ರಂದು ಪೊಲೀಸರು ಪಂಚನಾಮೆಗೆ ಸಹಕರಿಸುವಂತೆ ಸಾಕ್ಷಿಗೆ ನೀಡಿದ್ದಾರೆ ಎಂದು ಹೇಳಲಾದ ನೋಟೀಸು ಮತ್ತು ಅದೇ ದಿನ ಸಾಕ್ಷಿಯ ಸಮಕ್ಷಮ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ

ಪಂಚನಾಮೆಯಾಗಿದ್ದು ಅವುಗಳನ್ನು ನಿಪಿ.9 ಮತ್ತು ನಿಪಿ.10 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.9(ಎ) ಮತ್ತು ನಿಪಿ.10(ಎ) ಎಂದು ಗುರುತಿಸಲಾಯಿತು.

11. ಆ ಸಮಯದಲ್ಲಿ ಆರೋಪಿ ಪೊಲೀಸರ ಸುಪರ್ದಿಯಲ್ಲಿ ಇದ್ದನು. ನಂತರ ನಾನು, ಚಾಸಾ.3, ಆರೋಪಿ ಮತ್ತು ಪೊಲೀಸರು ಅವರ ಜೀಪಿನಲ್ಲಿ ಬೆಳಿಗ್ಗೆ 9.00 ಗಂಟೆಗೆ ಠಾಣೆಯಿಂದ ಹೊರಟೆವು. ಹೇರೂರು ಮಾರ್ಗವಾಗಿ ಬಸರೀಕಟ್ಟೆಗೆ ಹೋಗಿ ಅಲ್ಲಿಂದ 1 ರಿಂದ 1 ವರೆ ಕಿಲೋ ಮೀಟರ್ ದೂರದಲ್ಲಿದ್ದ ಹೊನ್ನಗುಂಡಿ ಗ್ರಾಮದಲ್ಲಿರುವ ಆರೋಪಿ ಯಶೋಧಾಳೊಂದಿಗೆ ವಾಸವಿದ್ದ ಮನೆಗೆ ಆರೋಪಿ ತೋರಿಸಿದ ಮಾರ್ಗದಲ್ಲಿ ಹೋದೆವು. ನಾವು ಅಲ್ಲಿಗೆ ಹೋದಾಗ ಸಮಯ ಬೆಳಿಗ್ಗೆ 9.45 ರಿಂದ 10.00 ಗಂಟೆಯಾಗಿತ್ತು.

12. ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಆತನ ಮನೆಯ ಹತ್ತಿರ ಜೀಪನ್ನು ನಿಲ್ಲಿಸಿ ನಂತರ ಆತ ತನ್ನ ಮನೆಯ ಒಳಗೆ ನಮ್ಮನ್ನು ಕರೆದುಕೊಂಡು ಹೋದನು. ಅಲ್ಲಿ ಯಶೋಧಾ ಮೃತಪಟ್ಟಿದ್ದ ಸ್ಥಳವನ್ನು ತೋರಿಸಿದನು. ನಂತರ ಅವರ ಮನೆಯ ಹಿಂಭಾಗದಲ್ಲಿದ್ದ ಕೊಟ್ಟಿಗೆಯ ಹತ್ತಿರ ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ಅವರ ಮನೆಯ ನಾಯಿಯನ್ನು ಕಟ್ಟಿದ್ದ ಸ್ಥಳದ ಪಕ್ಕದಲ್ಲಿದ್ದ ಒಂದು ಕೋಲನ್ನು ತಂದು ಪೊಲೀಸರಿಗೆ ಹಾಜರುಪಡಿಸಿ ಸದರಿ ಕೋಲಿನಿಂದ ತಾನು ಯಶೋಧಾಳನ್ನು ಹೊಡೆದು ಸಾಯಿಸಿದ್ದಾಗಿ ತಿಳಿಸಿದನು. ಸದರಿ ಕೋಲನ್ನು ಪೊಲೀಸರು ಪ್ಯಾಕ್ ಮಾಡಿ ತಮ್ಮ

ವಶಕ್ಕೆ ತೆಗೆದುಕೊಂಡು ಅದರ ಮೇಲೆ ನಮ್ಮ ಸಹಿಗಳಿರುವ ಚೀಟಿಯನ್ನು ಅಂಟಿಸಿದರು. ಸದರಿ ಕೋಲನ್ನು ನೋಡಿದರೆ ಗುರುತಿಸುತ್ತೇನೆ.

13. ಸದರಿ ಕೋಲು ಇದೆ ಎಂದು ಹೇಳಿ ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಒಂದು ಮರದ ಕೋಲನ್ನು ಗುರುತಿಸಿ ಆ ದಿನ ಪೊಲೀಸರಿಗೆ ಆರೋಪಿ ನಮ್ಮ ಸಮಕ್ಷಮ ಹಾಜರುಪಡಿಸಿದ ಕೋಲು ಅದೇ ಎಂದು ನುಡಿದಿರುತ್ತಾರೆ. ಸದರಿ ಕೋಲನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.1 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು.

14. ಆರೋಪಿ ತನ್ನ ವಾಸದ ಮನೆಯ ಮೊದಲನೇ ಕೋಣೆಯಲ್ಲಿದ್ದ ಮರದ ಟೇಬಲ್ ಮೇಲೆ ಸುತ್ತಿ ಇಟ್ಟಿದ್ದ ಒಂದು ಬೆಡ್ ಶೀಟನ್ನು ತಂದು ಪೊಲೀಸರಿಗೆ ಹಾಜರುಪಡಿಸಿದನು. ಅದರ ಮೇಲೆ ರಕ್ತದ ಕಲೆಗಳು ಆಗಿದ್ದವು. ಸದರಿ ರಕ್ತದ ಕಲೆಗಳು ತಾನು ಯಶೋಧಾಳಿಗೆ ಕೋಲಿನಿಂದ ಹೊಡೆದಾಗ ಆಕೆಗೆ ಗಾಯವಾಗಿ ರಕ್ತ ಬಂದು ಅದು ಸದರಿ ಬೆಡ್ ಶೀಟಿಗೆ ತಾಗಿದ್ದರಿಂದ ಅದನ್ನು ಸುತ್ತಿ ಎತ್ತಿಟ್ಟಿದ್ದಾಗಿ ತಿಳಿಸಿದನು. ಸದರಿ ಬೆಡ್ ಶೀಟಿನಲ್ಲಿ ರಕ್ತದ ಕಲೆಗಳಾಗಿದ್ದ ಭಾಗಗಳನ್ನು ಪೊಲೀಸರು

ಕತ್ತರಿಸಿ ಪ್ಯಾಕ್ ಮಾಡಿ ಅದರ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿ ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ ಬೆಡ್ ಶೀಟ್ ನ ಪೀಸನ್ನು ನೋಡಿದರೆ ಗುರುತಿಸುತ್ತೇನೆ.

15. ಸದರಿ ಬೆಡ್ ಶೀಟ್ ಇದೆ ಎಂದು ಹೇಳಿ ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ತಿಳಿ ನೀಲಿ ಮತ್ತು ಮಾಸಲು ಬಣ್ಣದ ಹೂವುಗಳ ಡಿಸೈನ್ ಉಳ್ಳ ಬೆಡ್ ಶೀಟಿನ ಪೀಸನ್ನು ನೋಡಿ ಗುರುತಿಸಿ ಆ ದಿನ ಪೊಲೀಸರಿಗೆ ಆರೋಪಿ ನಮ್ಮ ಸಮಕ್ಷಮ ಹಾಜರುಪಡಿಸಿದ ಬೆಡ್ ಶೀಟಿನ ಪೀಸು ಅದೇ ಎಂದು ನುಡಿದಿರುತ್ತಾರೆ. ಸದರಿ ಬೆಡ್ ಶೀಟಿನ ಪೀಸನ್ನು ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.2 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು.

16. ನಂತರ ಸದರಿ ರೂಮಿನಲ್ಲಿ ಬಟ್ಟೆಗಳನ್ನು ಇಡುವ ಜಾಗದಿಂದ ಆರೋಪಿ ಒಂದು ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಒಂದು ನೀಲಿ ಬಣ್ಣದ ತುಂಬು ತೋಳಿನ ಶರ್ಟನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿ ಅವುಗಳನ್ನು ತಾನು ಯಶೋಧಾಳನ್ನು ಕೋಲಿನಿಂದ ಹೊಡೆದು ಸಾಯಿಸುವಾಗ ಧರಿಸಿದ್ದಾಗಿ ತಿಳಿಸಿದನು. ಸದರಿ ಪ್ಯಾಂಟು ಮತ್ತು ಶರ್ಟನ್ನು ಪೊಲೀಸರು ನಮ್ಮ ಸಮಕ್ಷಮ ಪ್ರತ್ಯೇಕವಾಗಿ

ಪ್ಯಾಕ್ ಮಾಡಿ ಅವುಗಳ ಮೇಲೆ ನಮ್ಮ ಸಹಿಗಳಿರುವ ಚೀಟಿಯನ್ನು ಅಂಟಿಸಿದರು. ಸದರಿ ಪ್ಯಾಂಟು ಮತ್ತು ಶರ್ಟನ್ನು ನೋಡಿದರೆ ಗುರುತಿಸುತ್ತೇನೆ.

17. ಸದರಿ ಪ್ಯಾಂಟು ಮತ್ತು ಶರ್ಟು ಇದೆ ಎಂದು ಹೇಳಿ ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಒಂದು ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಒಂದು ನೀಲಿ ಬಣ್ಣದ ತುಂಬು ತೋಳಿನ ಶರ್ಟನ್ನು ನೋಡಿ ಗುರುತಿಸಿ ಆ ದಿನ ಪೊಲೀಸರಿಗೆ ಆರೋಪಿ ನಮ್ಮ ಸಮಕ್ಷಮ ಹಾಜರುಪಡಿಸಿದ ಪ್ಯಾಂಟು ಮತ್ತು ಶರ್ಟು ಅದೇ ಎಂದು ನುಡಿದ ಮೇರೆಗೆ ಅವುಗಳನ್ನು ಕ್ರಮವಾಗಿ ಮು.ಮಾ.3 ಮತ್ತು ಮು.ಮಾ.4 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.3 ಮತ್ತು ಮು.ಮಾ.4 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.3(ಎ) ಮತ್ತು ಮು.ಮಾ.4(ಎ) ಎಂದು ಗುರುತಿಸಲಾಯಿತು.

18. ನಂತರ ಆರೋಪಿ ಮೂರು ರಗ್ಗುಗಳನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿ ಅವುಗಳನ್ನು ಕೃತ್ಯಕ್ಕೆ ಬಳಸಿದ್ದಾಗಿ ತಿಳಿಸಿದನು. ಸದರಿ ರಗ್ಗುಗಳ ಪೀಸುಗಳನ್ನು ಕತ್ತರಿಸಿ ಪೊಲೀಸರು ನಮ್ಮ ಸಮಕ್ಷಮ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಅವುಗಳ ಮೇಲೆ

ನಮ್ಮ ಸಹಿಗಳಿರುವ ಚೀಟಿಯನ್ನು ಅಂಟಿಸಿದರು. ಸದರಿ ರಗ್ಗಿನ ಪೀಸುಗಳನ್ನು ನೋಡಿದರೆ ಗುರುತಿಸುತ್ತೇನೆ.

19. ಸದರಿ ರಗ್ಗಿನ ಪೀಸುಗಳು ಇದೆ ಎಂದು ಹೇಳಿ ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಒಂದು ಕಪ್ಪು ಹಸಿರು-ಕೆಂಪು ಮಿಶ್ರಿತ ಬಣ್ಣದ ಹುಣ್ಣೆಯ ರಗ್ಗಿನ ಪೀಸು, ಕೆಂಪು ಬಣ್ಣದ ರಗ್ಗಿನ ಪೀಸು ಮತ್ತು ನೀಲಿ ಬಣ್ಣದ ರಗ್ಗಿನ ಪೀಸನ್ನು ನೋಡಿ ಗುರುತಿಸಿ ಆ ದಿನ ಪೊಲೀಸರಿಗೆ ಆರೋಪಿ ನಮ್ಮ ಸಮಕ್ಷಮ ಹಾಜರುಪಡಿಸಿದ ರಗ್ಗಿನ ಪೀಸುಗಳು ಅವೇ ಎಂದು ನುಡಿದ ಮೇರೆಗೆ ಅವುಗಳನ್ನು ಕ್ರಮವಾಗಿ ಮು.ಮಾ.5 ರಿಂದ ಮು.ಮಾ.7 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.5 ರಿಂದ ಮು.ಮಾ.7 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.5(ಎ) ರಿಂದ ಮು.ಮಾ.7(ಎ) ಎಂದು ಗುರುತಿಸಲಾಯಿತು.

20. ನಂತರ ಆರೋಪಿ ಒಂದು ಒಳಲಂಗವನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿ ಅದನ್ನು ಯಶೋಧಾ ಕೃತ್ಯ ನಡೆಯುವ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿದನು. ಸದರಿ ಲಂಗದ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳಾಗಿತ್ತು. ಸದರಿ ಲಂಗದಲ್ಲಿ ರಕ್ತದ ಕಲೆಗಳಾಗಿದ್ದ ಭಾಗವನ್ನು ಕತ್ತರಿಸಿ ಅದನ್ನು ಪೊಲೀಸರು ನಮ್ಮ ಸಮಕ್ಷಮ ಪ್ಯಾಕ್ ಮಾಡಿ ಅದರ ಮೇಲೆ ನಮ್ಮ

ಸಹಿಯಿರುವ ಚೀಟಿಯನ್ನು ಅಂಟಿಸಿದರು. ಸದರಿ ಒಳ ಲಂಗದ ಪೀಸನ್ನು ನೋಡಿದರೆ ಗುರುತಿಸುತ್ತೇನೆ.

21. ಸದರಿ ಒಳ ಲಂಗದ ಪೀಸು ಇದೆ ಎಂದು ಹೇಳಿ ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಮಾಸಲು ಹಳದಿ ಬಣ್ಣದ ಒಳ ಲಂಗದ ಪೀಸನ್ನು ನೋಡಿ ಗುರುತಿಸಿ ಆ ದಿನ ಪೊಲೀಸರಿಗೆ ಆರೋಪಿ ನಮ್ಮ ಸಮಕ್ಷಮ ಹಾಜರುಪಡಿಸಿದ ಒಳ ಲಂಗದ ಪೀಸು ಅದೇ ಎಂದು ನುಡಿದ ಮೇರೆಗೆ ಅದನ್ನು ಮು.ಮಾ.8 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.8 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.8(ಎ) ಎಂದು ಗುರುತಿಸಲಾಯಿತು.

22. ಆ ಬಗ್ಗೆ ಪೊಲೀಸರು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮಹಜರ್ ಮಾಡಿಕೊಂಡರು.

23. ಸಾಕ್ಷಿಗೆ ಹತ್ತು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಆರೋಪಿ ಯಶೋಧಾಳೊಂದಿಗೆ ವಾಸವಿದ್ದ ಮನೆ ಕಂಡು ಬರುವುದಾಗಿ ನುಡಿದು ಸದರಿ ಮನೆಯಲ್ಲಿ ಮೇಲೆ ಹೇಳಿದಂತೆ ಪೊಲೀಸರು ಮಹಜರ್ ಜರುಗಿಸುವ ಸಮಯದಲ್ಲಿ ಅವುಗಳನ್ನು ತೆಗೆದುಕೊಂಡಿದ್ದಾಗಿ ನುಡಿದಿರುತಾರೆ. ಸದರಿ ಫೋಟೋಗಳನ್ನು ನಿಪಿ.11 ರಿಂದ ನಿಪಿ.20 ಎಂದು ಗುರುತಿಸಲಾಯಿತು. ಸದರಿ ಫೋಟೋಗಳ ಪೈಕಿ ನಿಪಿ.12,

ನಿಪಿ.14, ನಿಪಿ.15, ನಿಪಿ.16, ನಿಪಿ.19 ಫೋಟೋಗಳಲ್ಲಿ ತನ್ನ ಮತ್ತು ಚಾಸಾ.3 ರವರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳಲ್ಲಿ ತಮ್ಮೊಂದಿಗೆ ಆರೋಪಿ ಇರುವುದಾಗಿ ನುಡಿದಿರುತ್ತಾರೆ. ಸದರಿ ಪಂಚನಾಮೆಗೆ ನನ್ನೊಂದಿಗೆ ಚಾಸಾ.3 ರವರು ಸಹಿ ಮಾಡಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

24. ನೀವು ಮತ್ತು ಫ್ರಾಸಾ.1 ರವರು ಸ್ನೇಹಿತರು ಎಂದರೆ ಸಾಕ್ಷಿ ಸ್ನೇಹಿತರಲ್ಲ ಆದರೆ ಪರಿಚಯ ಎನ್ನುತ್ತಾರೆ. ಈ ದಿನ ಫ್ರಾಸಾ.1 ರವರು ನಿಮ್ಮ ಜೊತೆ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ಫ್ರಾಸಾ.1 ರವರಿಗೆ ಯಾವುದೇ ತೊಂದರೆಯಾದರೆ ನೀವು ಸ್ನೇಹಿತನಾಗಿ ಸಹಾಯ ಮಾಡುತ್ತೀರಿ ಎಂದರೆ ಸರಿಯಲ್ಲ. ನಾನು ಸತ್ಯ ಸಾರಾಮಣಿ ದೇವಸ್ಥಾನದ ಸಮಿತಿಯ ಅಧ್ಯಕ್ಷ. ಸದರಿ ದೇವಸ್ಥಾನದ ಸಮಿತಿಯ ಪದಾಧಿಕಾರಿಯ ಹುದ್ದೆಗೆ ಸಂಬಂಧಿಸಿದಂತೆ ಹಾಗೂ ಸದರಿ ದೇವಸ್ಥಾನದ ಹಣಕಾಸಿಗೆ ಸಂಬಂಧಿಸಿದಂತೆ ಆರೋಪಿ ಮತ್ತು ನಿಮ್ಮ ನಡುವೆ ಜಗಳವಾಗಿತ್ತು ಎಂದರೆ ಸರಿಯಲ್ಲ. ಆ ವಿಚಾರಕ್ಕೆ ನಿಮ್ಮ ಮತ್ತು ಆರೋಪಿತರ ಕುಟುಂಬದವರ ನಡುವೆ ಮನಸ್ತಾಪವಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಚೆನ್ನಾಗಿಯೇ ಇದ್ದೆವು ಎನ್ನುತ್ತಾರೆ.

25. ಮೃತ ಯಶೋಧಾಳಿಗೆ ಮಧ್ಯಪಾನ ಮಾಡುವ ಅಭ್ಯಾಸವಿತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಶೋಧಾಳಿಗೆ ಮಧ್ಯಪಾನ ಮಾಡುವ ಅಭ್ಯಾಸವಿದ್ದು ಆಕೆ ಕೂಲಿ ಕೆಲಸಕ್ಕೆ ಮಧ್ಯಪಾನ ಮಾಡಿಕೊಂಡು ಹೋಗುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ.

ಚಾಸಾ.16 ರವರು ನಿಮಗೆ ಫೋನ್ ಮಾಡಿ ಯಶೋಧಾ ಮೃತಪಟ್ಟಿದ್ದಾಗಿ ತಿಳಿಸಿದ್ದಾಗಿ ಹೇಳಿದ್ದೀರಿ ಆ ರೀತಿ ಅವರು ಕರೆ ಮಾಡಿದ ಮೊಬೈಲ್ ಸಂಖ್ಯೆ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಕೊನೆಯ ಸಂಖ್ಯೆ 58 ಆಗಿತ್ತು, ಉಳಿದ ಸಂಖ್ಯೆಗಳು ನನಗೆ ನೆನಪಿಲ್ಲ. ಸದರಿ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿಲ್ಲ.

26. ನಿಮ್ಮ ಮನೆಯಿಂದ ಆರೋಪಿಯ ಮನೆಗೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿ 5 ಕಿಲೋ ಮೀಟರ್ ದೂರವಾಗುತ್ತದೆ ಎನ್ನುತ್ತಾರೆ. ಆರೋಪಿಯ ವಾಸದ ಮನೆಯ ಸುತ್ತಮುತ್ತ ಎಷ್ಟು ವಾಸದ ಮನೆಗಳಿವೆ ಎಂದರೆ ಸಾಕ್ಷಿ ಸುಮಾರು 4 ಮನೆಗಳಿವೆ ಎನ್ನುತ್ತಾರೆ. ಸದರಿ ಮನೆಗಳಲ್ಲಿ ಜನರು ವಾಸಿಸುತ್ತಾರೆ ಎಂದರೆ ಸರಿ. ಜಯಪುರ ಪೊಲೀಸರು ನಿಮಗೆ ಪರಿಚಿತರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.7 ರಲ್ಲಿ ಬರೆದಿರುವ ವಿಚಾರಗಳು ತಿಳಿದಿವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.8 ಮಹಜರ್ ನಲ್ಲಿ ಬರೆದಿರುವ ವಿಚಾರಗಳು ತಿಳಿದಿವೆಯೇ ಎಂದರೆ ಸಾಕ್ಷಿ ನಾನು ಅದನ್ನು ಪೂರ್ತಿಯಾಗಿ ಓದಿಲ್ಲ ಎನ್ನುತ್ತಾರೆ. ನಿಪಿ.9 ರಲ್ಲಿ ಬರೆದಿರುವ ವಿಚಾರಗಳು ತಿಳಿದಿವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

27. ನಿಪಿ.10 ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನಿಮಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ನಿಪಿ.10 ದಾಖಲೆಯಲ್ಲಿ ಬರೆದಿರುವ ಚೆಕ್ಕು ಬಂದಿಯನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.12, 14, 15, 16 ಮತ್ತು 19 ಫೋಟೋಗಳನ್ನು ಯಾವ ವಿಚಾರಕ್ಕೆ ತೆಗೆದುಕೊಂಡರು ಎಂದು

ನಿಮಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ಮಹಜರ್ ಮಾಡಿದ ಸಲುವಾಗಿ ತೆಗೆದುಕೊಂಡಿದ್ದಾರೆ ಎನ್ನುತ್ತಾರೆ.

28. ಜಯಪುರ ಪೊಲೀಸ್ ಠಾಣೆಗೆ ಹೋಗಿದ್ದಾಗಿ ಹೇಳಿದ್ದೀರಿ ಆ ಸಮಯದಲ್ಲಿ ಪೊಲೀಸರು ನಿಮ್ಮಿಂದ ಒಟ್ಟು ಎಷ್ಟು ಸಹಿಗಳನ್ನು ಪಡೆದುಕೊಂಡರು ಎಂದರೆ ಸಾಕ್ಷಿ 2 ಸಹಿಗಳನ್ನು ಪಡೆದುಕೊಂಡಿದ್ದಾರೆ ಎನ್ನುತ್ತಾರೆ. ಸಾಕ್ಷಿಗೆ ನಿಪಿ.7, 8, 9, 10 ದಾಖಲೆಗಳನ್ನು ತೋರಿಸಿ ಅವುಗಳ ಪೈಕಿ ಯಾವ ದಾಖಲೆಗಳಲ್ಲಿರುವ ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೀರಿ ಎಂದರೆ ಸಾಕ್ಷಿ 2 ಸಹಿಗಳನ್ನು ಮಾಡಿದ್ದೇನೆ ಆದರೆ ಯಾವ ಸಹಿ ಎಂದು ನಿಖರವಾಗಿ ಹೇಳಲಾಗುವುದಿಲ್ಲ ಎನ್ನುತ್ತಾರೆ. ಪೊಲೀಸ್ ಠಾಣೆಯಲ್ಲಿ ಖಾಲಿ ಹಾಳೆಗೆ ಎಷ್ಟು ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ನಾನು ಖಾಲಿ ಹಾಳೆಗೆ ಸಹಿ ಮಾಡಿಲ್ಲ ಎನ್ನುತ್ತಾರೆ.

29. ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 4 ರಲ್ಲಿ ಹೆಸರಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ ಸ್ಥಳದಲ್ಲಿ ಬೇರೆ ಯಾರು ಇದ್ದರು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಆರೋಪಿಯ ತಮ್ಮ ಉಮೇಶ, ಆತನ ಹೆಂಡತಿ ಲಕ್ಷ್ಮೀ ಮತ್ತು ಇತರರು ಇದ್ದರು ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 6 ರಲ್ಲಿ ತಿಳಿಸಿರುವ ಗಾಯಗಳು ಯಶೋಧಾ ಮದ್ಯಪಾನ ಮಾಡಿ ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಬಿದ್ದು ಮಾಡಿಕೊಂಡಿದ್ದ ಗಾಯಗಳು ಎಂದರೆ ಸರಿಯಲ್ಲ.

30. ಯಶೋಧಾ ಆರೋಪಿಯ ಮೇಲೆ ಆತನಿಗೆ ಬೇರೆಯವರೊಂದಿಗೆ ಸಂಬಂಧವಿದೆ ಎಂದು

ಅನುಮಾನಪಡುತ್ತಿದ್ದರಿಂದ ಆಕೆ ಮೃತಪಡುವ ಹಿಂದಿನ ದಿನ ಆರೋಪಿ ಕುಡಿದು ಬಂದು ಆಕೆಯೊಂದಿಗೆ ಗಲಾಟೆ ಮಾಡುತ್ತಿದ್ದಾಗಿ ಅವರ ಪಕ್ಕದ ಮನೆಯವರಿಂದ ನನಗೆ ತಿಳಿಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಯಶೋಧಾ ಅನ್ಯೂನ್ಯವಾಗಿ ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ.

31. ನೀವು ಚಾಸಾ.13 ರವರು ಇದ್ದುದ್ದಾಗಿ, ನೀವು ಅವನನ್ನು ವಿಚಾರಿಸಿದ್ದಾಗಿ, ಆಗ ಆತ ಹಿಂದಿನ ದಿನ ಆರೋಪಿ ಮತ್ತು ಯಶೋಧಾ ಜಗಳ ಮಾಡಿಕೊಳ್ಳುತ್ತಿದ್ದಾಗಿ ನಂತರ ಆತ ಊಟ ಮಾಡಿ ಮಲಗಿದ್ದಾಗಿ, ಮಾರನೇ ದಿನ ಆತ ಎದ್ದು ನೋಡಿದಾಗ ಆತನ ತಾಯಿ ಮೃತಪಟ್ಟಿದ್ದಾಗಿ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಚಾಸಾ.13 ರವರು ನಿಮಗೆ ಯಾವುದೇ ವಿಚಾರಗಳನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ.

32. ಆರೋಪಿ ಯಶೋಧಾಳೊಂದಿಗೆ ಗಲಾಟೆ ಮಾಡಿ ಕೋಲಿನಿಂದ ಆಕೆಗೆ ಹೊಡೆದು ಕೊಂದಿರುವುದಾಗಿ ತಿಳಿಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಮೇಲೆ ನಿಮಗೆ ಇದ್ದ ಹಳೆಯ ದ್ವೇಷದಿಂದಾಗಿ ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಪೊಲೀಸರು ಯಾವುದೇ ಶವ ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ.

33. ನಿಪಿ.3 ರಿಂದ ನಿಪಿ.5 ಫೋಟೋಗಳಲ್ಲಿ ಯಶೋಧಾಳ ಮೃತದೇಹದ ಮೇಲೆ ಗಾಯಗಳು ಕಂಡು ಬರುವುದಾಗಿ ಹೇಳಿದ್ದೀರಿ ಸದರಿ ಗಾಯಗಳು ಆಕೆ ಮಧ್ಯಪಾನ ಮಾಡಿ ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಬಿದ್ದು ಮಾಡಿಕೊಂಡಿದ್ದಾಗ ಆಗಿದ್ದ ಗಾಯಗಳು ಎಂದರೆ ಸರಿಯಲ್ಲ.

34. ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಆತನ ಮನೆಯ ಹತ್ತಿರ ಜೀಪನ್ನು ನಿಲ್ಲಿಸಿ ನಂತರ ಆತ ತನ್ನ ಮನೆಯ ಒಳಗೆ ನಮ್ಮನ್ನು ಕರೆದುಕೊಂಡು ಹೋದನು, ಅಲ್ಲಿ ಯಶೋಧಾ ಮೃತಪಟ್ಟಿದ್ದ ಸ್ಥಳವನ್ನು ತೋರಿಸಿದನು, ನಂತರ ಅವರ ಮನೆಯ ಹಿಂಭಾಗದಲ್ಲಿದ್ದ ಕೊಟ್ಟಿಗೆಯ ಹತ್ತಿರ ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ಅವರ ಮನೆಯ ನಾಯಿಯನ್ನು ಕಟ್ಟಿದ್ದ ಸ್ಥಳದ ಪಕ್ಕದಲ್ಲಿದ್ದ ಒಂದು ಕೋಲನ್ನು ತಂದು ಪೊಲೀಸರಿಗೆ ಹಾಜರುಪಡಿಸಿ ಸದರಿ ಕೋಲಿನಿಂದ ತಾನು ಯಶೋಧಾಳನ್ನು ಹೊಡೆದು ಸಾಯಿಸಿದ್ದಾಗಿ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಆರೋಪಿ ನಿಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ, ಸ್ಥಳವನ್ನು ತೋರಿಸಿಲ್ಲ ಮತ್ತು ಮು.ಮಾ.1 ರಂತೆ ಯಾವುದೇ ಕೋಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

35. ಆರೋಪಿ ತನ್ನ ವಾಸದ ಮನೆಯ ಮೊದಲನೇ ಕೋಣೆಯಲ್ಲಿದ್ದ ಮರದ ಟೇಬಲ್ ಮೇಲೆ ಸುತ್ತಿ ಇಟ್ಟಿದ್ದ ಒಂದು ಬೆಡ್ ಶೀಟನ್ನು ತಂದು ಪೊಲೀಸರಿಗೆ ಹಾಜರುಪಡಿಸಿದನು, ಅದರ ಮೇಲೆ ರಕ್ತದ ಕಲೆಗಳು ಆಗಿದ್ದವು, ಸದರಿ ರಕ್ತದ ಕಲೆಗಳು ತಾನು ಯಶೋಧಾಳಿಗೆ ಕೋಲಿನಿಂದ ಹೊಡೆದಾಗ ಆಕೆಗೆ

ಗಾಯವಾಗಿ ರಕ್ತ ಬಂದು ಅದು ಸದರಿ ಬೆಡ್ ಶೀಟಿಗೆ ತಾಗಿದ್ದರಿಂದ ಅದನ್ನು ಸುತ್ತಿ ಎತ್ತಿಟ್ಟಿದ್ದಾಗಿ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಆರೋಪಿ ಮು.ಮಾ.2 ರಂತೆ ನಿಮ್ಮ ಸಮಕ್ಷಮ ಯಾವುದೇ ಬೆಡ್ ಶೀಟಿನ ಪೀಸನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

36. ಸದರಿ ರೂಮಿನಲ್ಲಿ ಬಟ್ಟೆಗಳನ್ನು ಇಡುವ ಜಾಗದಿಂದ ಆರೋಪಿ ಒಂದು ಬೂದು ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಒಂದು ನೀಲಿ ಬಣ್ಣದ ತುಂಬು ತೋಳಿನ ಶರ್ಟನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿ ಅವುಗಳನ್ನು ತಾನು ಯಶೋಧಾಳನ್ನು ಕೋಲಿನಿಂದ ಹೊಡೆದು ಸಾಯಿಸುವಾಗ ಧರಿಸಿದ್ದಾಗಿ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಮು.ಮಾ.3 ಮತ್ತು 4 ಎಂದು ಗುರುತಿಸಲ್ಪಟ್ಟಿರುವ ಬಟ್ಟೆಗಳನ್ನು ಆರೋಪಿ ನಿಮ್ಮ ಸಮಕ್ಷಮ ಪೊಲೀಸರಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

37. ನಂತರ ಆರೋಪಿ ಮೂರು ರಗ್ಗುಗಳನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿ ಅವುಗಳನ್ನು ಕೃತ್ಯಕ್ಕೆ ಬಳಸಿದ್ದಾಗಿ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಮು.ಮಾ.5 ರಿಂದ 7 ಎಂದು ಗುರುತಿಸಲ್ಪಟ್ಟಿರುವ ಯಾವುದೇ ರಗ್ಗಿನ ಪೀಸುಗಳನ್ನು ಆರೋಪಿ ನಿಮ್ಮ ಸಮಕ್ಷಮ ಪೊಲೀಸರಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

38. ನಂತರ ಆರೋಪಿ ಒಂದು ಒಳಲಂಗವನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿ ಅದನ್ನು ಯಶೋಧಾ ಕೃತ್ಯ ನಡೆಯುವ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿದನು, ಸದರಿ ಲಂಗದ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳಾಗಿತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ಮು.ಮಾ.8 ಎಂದು ಗುರುತಿಸಲ್ಪಟ್ಟಿರುವ ಯಾವುದೇ ಒಳಲಂಗವನ್ನು ಆರೋಪಿ ನಿಮ್ಮ ಸಮಕ್ಷಮ ಪೊಲೀಸರಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

39. ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಕೋಲು ಹಳ್ಳಿಗಳಲ್ಲಿ ಎಲ್ಲಾ ಕಡೆಗಳಲ್ಲಿ ದೊರಕುತ್ತವೆ ಎಂದರೆ ಸರಿ. ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ದೊಣ್ಣೆಯನ್ನು ನೀವು ಗುರುತಿಸಲು ಅದರ ಮೇಲೆ ಯಾವುದೇ ವಿಶೇಷ ಗುರುತು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಆರೋಪಿ ಅದೇ ಕೋಲನ್ನು ಹಾಜರುಪಡಿಸಿದ್ದನು ಎನ್ನುತ್ತಾರೆ.

40. ಮು.ಮಾ.1 ರಿಂದ ಮು.ಮಾ.8 ಎಂದು ಗುರುತಿಸಲ್ಪಟ್ಟಿರುವ ಮುದ್ದೆ ಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನೀವು ಇಲ್ಲಿಯವರೆಗೆ ಎಷ್ಟು ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸಾಕ್ಷಿ ಇದೇ ಮೊದಲ ಬಾರಿಗೆ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುತ್ತಾರೆ.

41. ನೀವು ಹೇಳಿದಂತೆ ಪೊಲೀಸರು ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಜರುಗಿಸಿಲ್ಲ ಬದಲಿಗೆ ನೀವು ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿದ್ದರೂ ಸಹ ಸ್ಥಳದಲ್ಲಿ

ಸಹಿ ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೂ ಆರೋಪಿಗೂ ದೇವಸ್ಥಾನದ ವಿಚಾರದಲ್ಲಿ ಗಲಾಟೆಯಾಗಿದ್ದರಿಂದ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ನಮ್ಮ ನಡುವೆ ಯಾವುದೇ ಗಲಾಟೆ ನಡೆದಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿಲ್ಲ ಎನ್ನುತ್ತಾರೆ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್